# ಮಿಕ ಅಲ್ಲ, ಮಿಕಾ!

‘ನಾನು ಹಾಡುವಾಗ ಆತ ಮಹಿಳೆಯರ ಜತೆಗೆ ನಿಂತಿದ್ದ. ಕುಡಿದಿದ್ದ. ದೂರ ಹೋಗು ಎಂದರೂ ಕೇಳಲಿಲ್ಲ. ಅದಕ್ಕೇ ಆತನ ಕೆನ್ನೆಗೆ ಹೊಡೆದೆ’– ಇದು ಮಿಕಾ ಸಿಂಗ್ ಹೇಳಿಕೆ. ‘ಸಂಗೀತ–ನೃತ್ಯದ ಗದ್ದಲದಲ್ಲಿ ಆತ ಏನು ಹೇಳಿದ್ದೆಂದು ಕೇಳಿಸಲಿಲ್ಲ. ನನ್ನನ್ನು ವೇದಿಕೆಗೆ ಕರೆದ. ಹೋದರೆ ಕೆನ್ನೆಗೆರಡು ಬಾರಿಸಿದ. ನನ್ನ ಕಿವಿಯಲ್ಲಿ ರಕ್ತ ಬಂತು. ಅದಕ್ಕೇ ಪೊಲೀಸ್ ದೂರು ನೀಡಿದ್ದೇನೆ’– ಇದು ದೆಹಲಿಯಲ್ಲಿ ಕಳೆದ ವಾರ ನಡೆದ ಆ ಲೈವ್ ಷೋನಲ್ಲಿ ಏಟು ತಿಂದ ಡಾಕ್ಟರ್ ಶ್ರೀಕಾಂತ್ ಎಂಬವರ ಪೊಲೀಸ್ ದೂರು. ಮಿಕಾ ಸಿಂಗ್ ಎನ್ನುವ ಅರೆಬರೆ ಷೋಮ್ಯಾನ್‌ನ ಲೈವ್ ಕಾರ್ಯಕ್ರಮದಲ್ಲಿ ಅಬ್ಬರದ ಹಿನ್ನೆಲೆ ಸಂಗೀತದ ಮಧ್ಯೆ ಹಾಡುಗಳನ್ನು ಯಾರು ಕೇಳಿಸಿಕೊಳ್ಳುತ್ತಾರೆ? ಅಲ್ಲಿಗೆ ಬರುವವರೆಲ್ಲ ಕುಣಿಯಲೆಂದೇ ಬರುವವರು. ಕುಣಿಯಲು ಬಂದವರು ಕುಡಿಯದೆ ಬರುತ್ತಾರೆಯೆ? ಸಂಗೀತ ಅನ್ನುವುದು ಕೇವಲ ಮನರಂಜನೆ ಎಂದು ನಂಬಿಕೊಂಡಿರುವ ಮಿಕಾ ಸಿಂಗ್, ಪ್ರೇಕ್ಷಕರು ಸಭ್ಯವಾಗಿ ನಡೆದುಕೊಳ್ಳಬೇಕೆಂದು ಬಯಸಿದರೆ ಅದನ್ನು ಅನುಸರಿಸುವವರು ಯಾರು? ಕಳೆದ ವರ್ಷ ಮುಂಬೈಯಲ್ಲಿ ‘ಮುಂಬೈ ಕ್ಯಾನ್ ಡ್ಯಾನ್ಸ್ ಸಾಲಾ’ ಎಂಬ ಸಿನಿಮಾದ ಟ್ರೈಲರ್ ಬಿಡುಗಡೆಯ ವೇಳೆ ಇದೇ ಮಿಕಾ ಸಿಂಗ್, ವೇದಿಕೆಯ ಮೇಲೆ ನಿಂತಿದ್ದ ರಾಖಿ ಸಾವಂತ್‌ಳನ್ನು ಹಠಾತ್ತಾಗಿ ತಬ್ಬಿಕೊಂಡು ಮುತ್ತು ಕೊಟ್ಟಿದ್ದು ದೊಡ್ಡ ಸುದ್ದಿಯೇ ಆಯಿತು. ಮೊದಲು ಸಿಡಿಮಿಡಿಗೊಂಡ ರಾಖಿ, ಬಳಿಕ ಅನಿವಾರ್ಯವೆಂಬಂತೆ ಮಿಕಾ ಜತೆಗೆ ಕೈಕುಲುಕಿ ರಾಜಿ ಮಾಡಿಕೊಂಡರು. ಅಲ್ಲೂ ಸಂಗೀತದ ಅಬ್ಬರವಿತ್ತು, ಮದ್ಯದ ಪರಿಮಳವಿತ್ತು! ಯಾರಿಗೆ ಯಾರು ಬುದ್ಧಿ ಹೇಳುವುದು?

ಏಟು ತಿಂದ ವೈದ್ಯರ ಗೆಳೆಯರು ದೆಹಲಿಯ ಸಮಾರಂಭದಲ್ಲೇ ಗದ್ದಲ ಮಾಡಿದಾಗ ಪೊಲೀಸರು ಮಧ್ಯಪ್ರವೇಶಿಸಿ, ಮಿಕಾ ವಿರುದ್ಧ ಕೇಸು ದಾಖಲಿಸುವುದಾಗಿ ಭರವಸೆ ನೀಡಿದ್ದರು. ಆದರೆ ಕಾರ್ಯಕ್ರಮ ಮುಗಿದ ಬಳಿಕ ವಿದೇಶಕ್ಕೆ ತೆರಳಿದ ಮಿಕಾ, 2 ತಿಂಗಳ ಕಾಲ ಭಾರತಕ್ಕೆ ಬರಲೇ ಇಲ್ಲ. ಕಳೆದ ವಾರ ಮರಳಿಬಂದ ಮಿಕಾರನ್ನು ಬಂಧಿಸಿದ ಪೊಲೀಸರು ಕೋರ್ಟಿಗೆ ಹಾಜರುಪಡಿಸಿದ್ದು 20 ಸಾವಿರ ರೂಪಾಯಿ ಬಾಂಡ್ ಮೇಲೆ ಜಾಮೀನು ಬಿಡುಗಡೆ ಸಿಕ್ಕಿದೆ.



ಹಾಗೆ ನೋಡಿದರೆ ಗಲಾಟೆ, ವಿವಾದಗಳು ಮಿಕಾಗೆ ಹೊಸತೇನೂ ಅಲ್ಲ. ಈತನ ವಿರುದ್ಧ ಕೆಲವು ವರ್ಷಗಳ ಹಿಂದೆ ಇನ್ನೂ ಒಂದು ದೂರು ದಾಖಲಾಗಿತ್ತು. ಅಹ್ಮದಾಬಾದ್‌ನ ಇವೆಂಟ್ ಮ್ಯಾನೇಜ್‌ಮೆಂಟ್ ಕಂಪೆನಿಗೆ 27 ಲಕ್ಷ ರೂಪಾಯಿ ಮೋಸ ಮಾಡಿದ್ದಾರೆಂಬುದೇ ಆ ದೂರು. ಇವತ್ತು 27 ಲಕ್ಷ ಎನ್ನುವುದು ಮಿಕಾ ಪಾಲಿಗೆ ಜುಜುಬಿ ಹಣ. ಬಾಲಿವುಡ್‌ನಲ್ಲಿ ಅಷ್ಟೊಂದು ಬೇಡಿಕೆಯಿದೆ. ಅಮೆರಿಕಾ, ಆಫ್ರಿಕಾದಲ್ಲೂ ಮಿಕಾ ನೀಡುವ ಲೈವ್ ಷೋಗೆ ಲಕ್ಷಾಂತರ ಜನ ಸೇರುತ್ತಾರೆ. ಹಣ ಕಾಲಬುಡಕ್ಕೆ ಬಂದು ಬೀಳುತ್ತಿದೆ.

ಬಿಹಾರದಲ್ಲಿ ಜನಿಸಿದ ಮಿಕಾನ ಬಾಲ್ಯದ ಹೆಸರು ಅಮ್ರಿಕ್ ಸಿಂಗ್. ಕುಟುಂಬಕ್ಕೆ ತಲೆಮಾರುಗಳಿಂದಲೇ ಸಂಗೀತದ ಹುಚ್ಚಿತ್ತು. ದಲೇರ್ ಮೆಹಂದಿ ಈತನ ಅಣ್ಣ. ಅಮ್ರಿಕ್ ಕೂಡಾ ಬಾಲ್ಯದಲ್ಲಿ ಗುರುದ್ವಾರಗಳಲ್ಲಿ ಕೀರ್ತನೆಗಳನ್ನು ಹಾಡುತ್ತಿದ್ದ. ದಲೇರ್‌ನ ದೊಡ್ಡಣ್ಣ ಅಮೆರಿಕದಲ್ಲಿ ಖಾಲ್ಸಾ ಟ್ಯಾಕ್ಸಿ ಕಂಪೆನಿ ಇಟ್ಟುಕೊಂಡಿದ್ದರು. ಟ್ಯಾಕ್ಸಿ ಡ್ರೈವರ್ ಆಗಿ ದಲೇರ್ ಮತ್ತು ಮಿಕಾ ಇಬ್ಬರೂ ಅಮೆರಿಕಕ್ಕೆ ತೆರಳಿದ್ದರು. ಆದರೆ ಒಂದೆರಡು ವರ್ಷದಲ್ಲೇ ಕೆಲಸ ಬೇಸರ ಬಂದು ಇಬ್ಬರೂ ಭಾರತಕ್ಕೆ ವಾಪಸಾದರು. ಸ್ವಂತ ಮ್ಯೂಸಿಕ್ ತಂಡ ಕಟ್ಟಿದ ದಲೇರ್ ಪಂಜಾಬಿನಲ್ಲಿ ಜನಪ್ರಿಯತೆ ಗಳಿಸಿದ್ದಾಗಲೇ, ಬಾಲಿವುಡ್‌ನಿಂದ ಕರೆ ಬಂತು. ಅಮಿತಾಭ್ ನಟಿಸಿದ ಚಿತ್ರದಲ್ಲಿ ‘ಬೋಲೊ ತರ ತರ ತರ’ ಎಂಬ ಹಾಡು ಸೂಪರ್‌ಹಿಟ್ ಆದದ್ದೇ ದಲೇರ್ ಬೇಡಿಕೆ ಮುಗಿಲಿಗೇರಿತು. ಅದರ ಬೆನ್ನಲ್ಲೇ ಮಿಕಾ ಬರೆದ ‘ದರ್‌ದೀ ರಬ್ ರಬ್’ ಎನ್ನುವ ಹಾಡೂ ಸೂಪರ್‌ಹಿಟ್ ಆಯಿತು. 90ರ ದಶಕದ ಉತ್ತರಾರ್ಧದಲ್ಲಿ ಈ ತಂಡದ ಖ್ಯಾತಿ ಮುಗಿಲಿಗೇರಿತ್ತು.

ಅಣ್ಣನ ಬ್ಯಾಂಡ್‌ನಲ್ಲಿ ಗಿಟಾರ್ ಮತ್ತು ಡ್ರಮ್ ಬಾರಿಸುತ್ತಿದ್ದ ಮಿಕಾ ಆಗಲೂ ಸದಾ ಜಗಳ ಕಾಯುತ್ತಿದ್ದ. 1998ರಲ್ಲಿ ಅಣ್ಣನ ತಂಡ ಬಿಟ್ಟು ತನ್ನದೇ ತಂಡ ಕಟ್ಟಿಕೊಂಡ. ಬಾಲಿವುಡ್‌ನಲ್ಲೂ ಬೇಡಿಕೆ ಕುದುರಿತ್ತು. ಈಗಂತೂ ಆತ ಅಣ್ಣ ದಲೇರ್ ಮೆಹಂದಿಗಿಂತಲೂ ಒಂದು ತೂಕ ಹೆಚ್ಚೇ ಜನಪ್ರಿಯ. ಬಸ್ ಏಕ್ ಕಿಂಗ್ (ಸಿಂಗ್ ಈಸ್ ಕಿಂಗ್), ಇಬ್ನೆ ಬತೂತಾ (ಇಷ್ಕಿಯಾಂ), ಡಿಂಕ ಚಿಕಾ (ರೆಡಿ) ಮೌಜಾ ಹಿ ಮೌಜಾ (ಜಬ್ ವಿ ಮೆಟ್), ಚಿಂಟಾಟ ಚಿಂಟಾಟ (ರೌಡಿ ರಾಠೋರ್) ಮುಂತಾದ ಬಾಲಿವುಡ್‌ನ ಸೂಪರ್‌ಹಿಟ್ ಹಾಡುಗಳು ಮಿಕಾನ ಯಶಸ್ಸಿನ ಕಥೆ ಹೇಳುತ್ತವೆ.

ಬಾಲಿವುಡ್‌ನಲ್ಲಿ ಮಿಕಾ ಅವಕಾಶಕ್ಕೆ ಯತ್ನಿಸುತ್ತಿದ್ದಾಗ ಯಾರೋ ಶಾರೂಕ್ ಖಾನ್‌ನನ್ನು ಭೇಟಿಯಾಗಲು ಸೂಚಿಸಿದರಂತೆ. ಶಾರೂಕ್ ಬಳಿಯಲ್ಲಿ ಐಶಾರಾಮಿ ಕಾರು ಇದ್ದುದು ಗೊತ್ತಿದ್ದ ಮಿಕಾ, ಹೊಸದೊಂದು ಹಮ್ಮರ್ ಖರೀದಿಸಿ ಅದರಲ್ಲೇ ಶಾರೂಕ್ ಮನೆಗೆ ತೆರಳಿದನಂತೆ. ಅಲ್ಲಿ ಹೋಗಿಯೂ ‘ನನಗೊಂದು ಅವಕಾಶ ಕೊಡಿ’ ಎಂದು ಕೇಳುವ ಬದಲು ದೇಶಾವರಿ ಮಾತನಾಡಿಕೊಂಡು ವಾಪಸ್ ಬಂದನಂತೆ. ‘ನನಗೆ ಯಾರ ಬಳಿಯೂ ಕೈಚಾಚಿ ಗೊತ್ತಿಲ್ಲ; ಅವರಿಗೆ ನನ್ನ ಹಾಡುಗಳ ಜನಪ್ರಿಯತೆ ಗೊತ್ತಿದ್ದರೆ ಅವರಾಗಿಯೇ ಅವಕಾಶ ಕೊಡಬೇಕು’ ಎಂದು ಆ ಬಳಿಕ ಮಿಕಾ ಹೇಳಿದ್ದು ಸುದ್ದಿಯಾಯಿತು. ಮಿಕಾನ ಅಪ್ಪ ಕೂಡಾ ಹೀಗೆಯೇ ಇದ್ದರಂತೆ. ದಲೇರ್ ಮತ್ತು ಮಿಕಾ ಕೈ ತುಂಬ ಸಂಪಾದಿಸಿ, ಐಶಾರಾಮಿ ಕಾರುಗಳಲ್ಲಿ ಓಡಾಡುತ್ತಿದ್ದರೂ ಅಪ್ಪ ಮಾತ್ರ ತನ್ನ ಹಳೆಯ ಸೈಕಲ್‌ನಲ್ಲಿ ದೆಹಲಿಯಲ್ಲಿ ಓಡಾಡುತ್ತಿದ್ದರಂತೆ! ಕೇಳಿದರೆ, ‘ಮಕ್ಕಳು ದುಡಿದ ಹಣದಲ್ಲಿ ನಾನು ಚೈನಿ ಹೊಡೆಯುವುದಿಲ್ಲ’ ಎನ್ನುತ್ತಿದ್ದರಂತೆ!

38ರ ಹರೆಯದಲ್ಲಿಯೇ ದುಡ್ಡು ಮತ್ತು ಜನಪ್ರಿಯತೆ ಎರಡೂ ಮಿಕಾನ ಕಾಲಬುಡದಲ್ಲಿದೆ; ಆದರೆ ಆತನಿಗೆ ಸಜ್ಜನಿಕೆ ಮತ್ತು ವಿನಯವಂತಿಕೆಯನ್ನು ಕಲಿಸುವವರು ಯಾರು? ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65